## ವರ್ಷಕ್ಕೊಂದು ಧಾರಾವಾಹಿ

ಎಲ್ಲಾ ಟೀವಿ ಚಾನೆಲ್‌ಗಳಲ್ಲಿ ಪ್ರಸಾರವಾಗುತ್ತಿದ್ದ ಧಾರಾವಾಹಿಗಳು ಒಮ್ಮೆಲೇ ಸ್ಥಗಿತಗೊಂಡು ಅದರ ನಡುವೆ ಬರುತ್ತಿದ್ದ ಕಮರ್ಷಿಯಲ್ ಜಾಹೀರಾತುಗಳೂ ಮಾಯವಾಗಿವೆ. ಮೇ ತಿಂಗಳ ನಂತರವೂ ಇದೇ ಪರಿಸ್ಥಿತಿ ಮುಂದುವರಿದಲ್ಲಿ ವೀಕ್ಷಕರಾದ ನಮಗೆ ಕಥೆಯ ನಿರೂಪಣೆ ಮರೆತು ಹೋಗುತ್ತದೆ. ಇದರಿಂದ ಘಟನೆಗಳು ಮರೆತು ಹೋದರೆ ಧಾರಾವಾಹಿಯನ್ನು ಗ್ರಹಿಸಲು ಸಮಯ ಬೇಕಾದೀತು. ಈ ಹಿನ್ನೆಲೆಯಲ್ಲಿ ಹಿಂದೆ ಬರುತ್ತಿದ್ದ ಧಾರಾವಾಹಿಗಳನ್ನು ಎಲ್ಲವನ್ನೂ ನಿಲ್ಲಿಸಿ ಹೊಸ ಧಾರಾವಾಹಿಯನ್ನು ಆರಂಭಿಸುವುದು ಒಳಿತು. ಅದಕ್ಕೆ ಕತೆಯ ಅಂತ್ಯವನ್ನು ಮೊದಲೇ ನಿರ್ಧರಿಸುವುದು ಒಳಿತು. ಒಂದು ವರ್ಷದ ಕಾಲಮಿತಿಗೆ ಸೀಮಿತಗೊಳಿಸಿ ಕತೆಯನ್ನು ಪರಿಣಾಮಕಾರಿಯಾಗಿ ಮಾಡಬಹುದು ಎನ್ನುವುದು ನನ್ನ ಅನಿಸಿಕೆ.

—ಅಂಚೆ ಸುಬ್ರಹ್ಮಣ್ಯ, ಬೆಂಗಳೂರು

## ಅರಿವು ಮೂಡಲಿ

ಕೊರೊನಾ ವೈರಸ್‌ನಿಂದ ಜಗತ್ತಿನ ಜನರೆಲ್ಲ ಆತಂಕದಲ್ಲಿ ದಿನವನ್ನು ದೂಡುತ್ತಿದ್ದಾರೆ. ಇಂತಹ ವಾತಾವರಣದಲ್ಲಿ ದೃಶ್ಯ ಮಾಧ್ಯಮಗಳು ಒಂದು ರೀತಿಯ ಅತಿರೇಕವನ್ನು ಪ್ರಕಟಿಸುತ್ತಿವೆ. ಅದನ್ನು ಮೀರಿಸುವಂತೆ ಸಾಮಾಜಿಕ ಮಾಧ್ಯಮಗಳು ಇಲ್ಲ ಸಲ್ಲದ, ನಕಲಿ ವಿಚಾರಗಳನ್ನು ಹರಿಯಬಿಟ್ಟು ಜನರನ್ನು ಇನ್ನಷ್ಟು ಭಯಭೀತರನ್ನಾಗಿಸುತ್ತಿವೆ.

ಇಂತಹ ಸಂದರ್ಭದಲ್ಲಿ ನಮ್ಮ ಸುದ್ದಿ ವಾಹಿನಿಗಳ ಜವಾಬ್ದಾರಿ ಮತ್ತಷ್ಟು ಹೆಚ್ಚಾಗಿರುತ್ತದೆ. ದೃಶ್ಯ ಮಾಧ್ಯಮ ಕೂಡ ಸಾಕಷ್ಟು ಉಪಯುಕ್ತ ಮಾಹಿಯನ್ನು ಪ್ರಸಾರ ಮಾಡುತ್ತಿವೆ. ಆದರೂ ಸಹ ದುರದೃಷ್ಟವಶಾತ್ ಎಲ್ಲಾ ವಾಹಿನಿಗಳು ಸ್ಪರ್ಧೆಗಿಳಿದಂತೆ ಈ ಬಗ್ಗೆ ಅಂತೆ ಕಂತೆ ಸುದ್ದಿ, ಕಂಟಕ, ರುದ್ರನರ್ತನ, ಮಾರಿಹಬ್ಬ, ಸರ್ವನಾಶ ಎಂಬಿತ್ಯಾದಿ ಬೆಚ್ಚಿ ಬೀಳಿಸುವ ಶೀರ್ಷಿಕೆ ಯೊಂದಿಗೆ ಅತಿರಂಜಿತ ವರದಿಗಳನ್ನು ಪ್ರಸಾರ ಮಾಡುತ್ತಾ ಮೊದಲೇ ಲಾಕ್ ಡೌನ್ ಆಗಿರುವ ವೀಕ್ಷಕರನ್ನು ಕಂಗೆಡಿಸುಸುತ್ತಿವೆ. ಈ ವಿಷಯದಲ್ಲಿ ಸರ್ಕಾರವು ಗಮನಹರಿಸಿ ಸೂಕ್ತ ಮಾರ್ಗಸೂಚಿ ರೂಪಿಸಬೇಕಾಗಿದೆ.

—ಎಚ್.ಕೆ.ಎನ್. ಮೂರ್ತಿ

## ಕನ್ನಡ ರಾಮಾಯಣ ಬರಲಿ

ಈಗಂತೂ ಎಲ್ಲಾ ಧಾರಾವಾಹಿಗಳು ಬಂದ್ ಆಗಿರುತ್ತವೆ. ಕನ್ನಡದಲ್ಲಿಯೂ ರಾಮಾಯಣ ಹಾಗೂ ಮಹಾಭಾರತವನ್ನು ಪ್ರಕಟಿಸಿದ್ದರೆ ನಮ್ಮ ಮಾತೃ ಭಾಷೆಯಲ್ಲಿ ನೋಡಲು ಅನುಕೂಲವಾಗುತ್ತದೆ. ಮನೆಯಲ್ಲಿ ದುಡಿಮೆ ಹೋಗುವವರೂ ಹಿರಿಯರು ಹಾಗೂ ಮಕ್ಕಳ ಜೊತೆ ಕುಳಿತು ಟೀವಿ ನೋಡುತ್ತಿರುವುದು ಈ ಹೊತ್ತಿನ ಅದ್ಭುತವೇ ಸರಿ. ಹೊರಗೆ ಹೋಗದೆ ಮನೆಯಲ್ಲಿಯೇ ಕುಳಿತು ಅವರೆಲ್ಲ ಅರ್ಥಪೂರ್ಣ ಧಾರಾವಾಹಿ ನೋಡಲು ಅನುಕೂಲವಾಗುತ್ತದೆ. ಚಂದನ ವಾಹಿನಿಯಲ್ಲಿ ಮಧುರ ಮಧುರವೀ ಮಂಜುಳಗಾನ ಪ್ರಸಾರ ಮಾಡಬೇಕು. ಹಾಗೂ ಝೀ ಟೀವಿ ಸರಿಗಮಪ ಕಾರ್ಯಕ್ರಮವನ್ನು ನಡೆಸಬೇಕು. ಇವು ಎಲ್ಲರೂ ನೋಡಬಹುದು ಎಂದು ನನಗೆ ಅನ್ನಿಸುತ್ತದೆ.

—ಬಸಪ್ಪ ಸೊ.ಮುಳ್ಳೂರ, ಹಲಗತ್ತಿ

ವಾರದ ಪತ್ರ

## ಮಲತಾಯಿ ಅಂದರೆ ತಾರತಮ್ಯವಲ್ಲ

ಉದಯ ಟೀವಿಯ ‘ಮನಸಾರೆ’ ಧಾರಾವಾಹಿ ತಂದೆಯ ಪ್ರೀತಿಗೊಸ್ಕರ ಕಾದಿರುವ ಮಗಳ ಕಥೆಯಾಗಿದೆ. ನಾನು ಹಾಗೂ ನನ್ನ ಮನೆಯವರು ತಪ್ಪದೇ ಈ ಧಾರಾವಾಹಿಯನ್ನು ನೋಡುತ್ತೇವೆ. ನನಗೆ ಪ್ರಾರ್ಥನಾ ಎಂಬ ಪಾತ್ರ ಬಹಳ ಇಷ್ಟ. ಹಾಗೇ ನಾಯಕನ ಪಾತ್ರವೂ ಇಷ್ಟವೆ. ಮನಸಾರೆ ಧಾರಾವಾಹಿಯಲ್ಲಿ ತಂದೆ ಮಕ್ಕಳ ಬಾಂಧವ್ಯ, ಅಕ್ಕ ತಂಗಿಯರ ಒಲವು, ನಾಯಕನ ತಂದೆಯ ಅತಿಯಾದ ಆಸೆ, ಪ್ರೀತಿ, ಸ್ನೇಹ, ಸಹಾಯ ಮಾಡುವ ಮನೋಭಾವದ ಮಾನವೀಯ ಸ್ಪದಂನೆಯನ್ನು ಒಳಗೊಂಡು ವೀಕ್ಷಕರಿಗೆ ಮೆಚ್ಚಾಗಿದೆಯಾಗಿದೆ ಎಂದು ನನಗೆ ಅನ್ನಿಸುತ್ತಿದೆ. ಬಹುತೇಕ ಹೆಚ್ಚಿನ ಕಥೆಗಳಲ್ಲಿ ಮಲತಾಯಿಯ ಪಾತ್ರವು ಕ್ರೂರವಾಗಿ ಚಿತ್ರಿಸಲಾಗುತ್ತಿದೆ. ಅದೇ ಕಾರಣಕ್ಕೆ ‘ಮಲತಾಯಿ ಧೋರಣೆ’ ಎಂದು ತಾರತಮ್ಯದ ನೀತಿಗಾಗಿ ಮಾಧ್ಯಮಗಳು ನುಡಿಗಟ್ಟನ್ನೇ ಸೃಷ್ಟಿಸಿವೆ. ಮಮತಾಮಯಿ ಮಲತಾಯಿಯ ಗುಣ ಇಲ್ಲಿ ಮಾತ್ರ ವಿಭಿನ್ನತೆಯಿಂದ ಕೂಡಿದೆ. ಹಾಗೇ ಪ್ರಾರ್ಥನಾಳಿಗೆ ತಂದೆ ಪ್ರೀತಿ ಮುಂದೆ ಸಿಗುತ್ತದೆಯೇ? ಪ್ರಾರ್ಥನಾ ಹಾಗೂ ಪಾವನಿ ಇಬ್ಬರೂ ನಾಯಕನನ್ನೇ ಇಷ್ಟ ಪಡುತ್ತಿದ್ದು, ಕೊನೆಗೆ ಯಾರಿಗೆ ನಾಯಕ ಸಿಗುತ್ತಾನೆ? ಒಂದು ವೇಳೆ ಪಾವನಿಗೆ ನಾಯಕ ಸಿಗದೇ ಪ್ರಾರ್ಥನಾಳಿಗೆ ದೊರೆತರೆ, ಪಾವನಿ ತನ್ನ ಅಕ್ಕನಿಂದ ದೂರವಾಗುತ್ತಾಳಾ? ಇಷ್ಟೆಲ್ಲ ಪ್ರಶ್ನೆಗಳು ಮನದಲ್ಲಿ ಸುಳಿದು ಹೋಗುತ್ತದೆ. ಕಳೆದೆರಡು ವಾರಗಳಿಂದ ಧಾರಾವಾಹಿಯ ಹೊಸ ಸಂಚಿಕೆಗಳು ಪ್ರಸಾರವಾಗುತ್ತಿಲ್ಲ ಅದೂ ಇಂತಹ ಲಾಕ್ಡೌನ್ ಸಂದರ್ಭದಲ್ಲಿ ನೆಚ್ಚಿನ ಕಥೆಯನ್ನು ಮಿಸ್ಮಾಡಿಕೊಳ್ಳುವುದು ಬೇಸರದ ಸಂಗತಿಯಾಗಿದೆ. ಮುಂದೆ ಈ ಧಾರಾವಾಹಿಯನ್ನು ಹೇಗೆ ಎಳೆ ಎಳೆಯಾಗಿ ಹೆಣೆಯಬಹುದು ಎಂದು ಸಾಕಷ್ಟು ಕುತೂಹಲವಿದೆ.

—ಸುನಂದಾ ಬಿ.ವಿ. ಬೆಂಗಳೂರು

## ಟೀವಿಯಲ್ಲಿ ಮತ್ತೆ ರಮೇಶ್...

ಕಳೆದ ಶನಿವಾರ ಹಾಗೂ ಭಾನುವಾರ ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾದ ವೀಕೆಂಡ್ ವಿಥ್ ರಮೇಶ್‌ನ ಮರುಪ್ರಸಾರ ಮನಸ್ಸಿಗೆ ತುಂಬಾ ಇಷ್ಟವಾಯಿತು. ದರ್ಶನ್ ಹಾಗೂ ನವರಸ ನಾಯಕ ಜಗ್ಗೇಶ್ ಅವರ ಸಂಪೂರ್ಣ ಕಾರ್ಯಕ್ರಮ ಒಂದೇ ಸಲ ಪ್ರಸಾರ ಆಗಿದ್ದು ನಾಲ್ಕು ಗಂಟೆಗಳು ಕಳೆದದ್ದು ಅರಿವಾಗಲಿಲ್ಲ. ಎಲ್ಲ ವಾಹಿನಿಗಳು ಕೊರೊನಾ ಬಗ್ಗೆಯೇ ಆತಂಕ ಮೂಡಿಸುತ್ತಿರುವ ಈ ಸಮಯದಲ್ಲಿ ಇಂಥ ಕಾರ್ಯಕ್ರಮ ಒಂದೇ ಸಮಾಧಾನ ನೀಡಿತು.

—ಎಸ್. ಶಶಿಧರ್, ಬೆಂಗಳೂರು

## ಭಾಷಾ ದಾರಿದ್ರ್ಯ!

‘ಎಣ್ಣೆ’ ಮಾರಾಟಕ್ಕೆ ಸದ್ಯಕ್ಕಿಲ್ಲ ಅವಕಾಶ? ಈ ವಾಕ್ಯವನ್ನು ಬಹುತೇಕ ಸುದ್ ಟೀವಿಗಳು ಸುದ್ದಿಮನೆಯ ಮಹಾನುಭಾವರಿಗೆ ಕಿವಿಹಿಂಡಿ ಕನ್ನಡ ಭಾಷೆಯನ್ನು ಕಲಿಸಬೇಕಾಗಿದೆ.

ಮದ್ಯವನ್ನು ’ಎಣ್ಣೆ’ ಎನ್ನುವುದು ಮಾದಕ ದ್ರವ್ಯ ಪ್ರಿಯರ ಭಾಷೆಯಲ್ಲಿ ಸರಿಯಿರಬಹುದು! ಆದರೆ ಪ್ರಧಾನಿಯ ಭಾಷಣವನ್ನು ನೇರ ಪ್ರಸಾರ ಮಾಡುವ ಸಂದರ್ಭದಲ್ಲಿ ‘ಮದ್ಯ ಮಾರಾಟ’ವನ್ನು ‘ಎಣ್ಣೆ ಮಾರಾಟ’ ಎಂದು ಭಾಷಾಂತರ ಮಾಡಿದ ಈ ಮಾಧ್ಯಮದವರ ಭಾಷಾಜ್ಞಾನಕ್ಕೆ ಏನನ್ನೋಣ? ಇದನ್ನು ನೋಡಿದ ವೀಕ್ಷಕರು ಇಂದಿನಿಂದ ಅಡುಗೆ ಮಾಡಲು ಎಣ್ಣೆ ದೊರೆಯುವುದಿಲ್ಲ ಎಂದು ಭಾವಿಸಿದರೆ! ಅವರನ್ನು ದಾರಿತಪ್ಪಿಸಿದಂತಾಗುವುದಿಲ್ಲವೇ? ಇವರಿಗೆಲ್ಲಾ ಆ ‘ಪರಮಾತ್ಮ’ನೇ ಒಳ್ಳೆಯ ಬುದ್ಧಿ ಕೊಡಲಿ... ಅಂದರೆ ಮದ್ಯಾರಾಧಕರ ’ಪರಮಾತ್ಮ’ ಅಲ್ಲ...

—ಪಿ.ಜೆ. ರಾಘವೇಂದ್ರ ಮೈಸೂರು

## ಬದಲಾಗಲಿ ಮಗಳು

9.30 ಪ್ರಸಾರವಾಗುವ ಧಾರಾವಾಹಿ ಕಲರ್ಸ್ ಸೂಪರ್‌ನಲ್ಲಿ ‘ಮಗಳು ಜಾನಕಿ’ ಬೇರೆ ದಾರಿಯಲ್ಲಿ ಹೋಗುತ್ತಿದೆ. ಮಧು ಯಾರ ಮಗ ಮತ್ತು ಜಾನಕಿ ಯಾರ ಮಗಳು? ಇದನ್ನು ನೋಡುವ ಪ್ರೇಕ್ಷಕರು ಇನ್ನೂ ಗೊಂದಲದಲ್ಲಿ ಸಿಕ್ಕಿದ್ದಾರೆ. ಭಾರ್ಗಿ ಅವರ ಎಲೆಕ್ಷನ್. ಒಂದು ಕಡೆ ಮಧು ಅವರೆಲ್ಲರ ಮದುವೆಯ ಸಮಾರಂಭ. ಎಲ್ಲವೂ ಸರಿ ಆದರೆ ಮಗಳು ಜಾನಕಿ ಎತ್ತ ಸಾಗಿದೆ ತಿಳಿಯದಾಗಿದೆ ಬೇಸರವಾಗಿದೆ. ಸೀತಾರಾಂ ಅವರು ಮುಂದಿನ ನಿಮ್ಮ ಮಗಳ ಜಾನಕಿಯ ಕಥೆ ಚೆನ್ನಾಗಿ ಮೂಡಿ ಬರಬೇಕು. ಕೋರ್ಟು ಸೀನು ಇದ್ದರೆ ನೋಡಲು ಚೆನ್ನಾಗಿರುತ್ತಿತ್ತು.

—ಬಿ.ಎಸ್. ಮುಳ್ಳೂರ, ಹಲಗತ್ತಿ